104 (270) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಹೊಸ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ:

ಆ) ಇದ್ದಲ್ಲಿ, ಇದಕ್ಕಾಗಿ ಮಿಸಲಿಟ್ಟ ಅನುದಾನ ಎಷ್ಟು?

ಶ್ರೀ ಬಿ, ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು, ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತ ಹಾಗು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮೀನುಗಾರಿಕೆ ಬಂದಿರಿನ 2ನೇ ಹಂತದ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಮೇಲ್ಕಾಣಿಸಿದ ಯೋಜನೆಗಳ ಪೂರ್ವಭಾವಿ ಅಧ್ಯಯನ ಕೈಗೊಂಡು ಸಾಮಾಜಿಕ-ಆರ್ಥಿಕಾ ಸಮೀಕ್ಷೆ ನಡೆಸಿ, ವಿವರವಾದ ಯೋಜನಾ ವರದಿ ತಯಾರಿಸಿ, ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಂಜೂರಾತಿ ಪಡೆದನಂತರ ಅಗತ್ಯತೆಗೆ ಅನುಗುಣವಾಗಿ ಅನುದಾನವನ್ನು ಒದಗಿಸಲು ಕ್ರಮ ವಹಿಸಲಾಗುವುದು.

105. (271) ಶ್ರೀ ಬಿ. ನಾಗಾಜಶೆಟ್ಟಿ. (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ) 2004 ರಿಂದ ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಹಂಚಿಕೆಯಾಗಿರುವ ಮನೆಗಳು ಎಷ್ಟು:

(ವಿಧಾನಸಭಾ ಕ್ಷೇತ್ರಗಾರ ವಿವರ ನೀಡುವುದು):

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಅನುದಾನ ಎಷ್ಟು ಹಾಗೂ ಬಿಡುಗಡೆಯಾದ ಹಣ ಎಷ್ಟು:

ಇ) ಬ್ರಹ್ಮಾವರ ಕ್ಷೇತ್ರದಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ?

ಶ್ರೀ ಬಿ. ನಾಗರಾಜ ಶೆಟ್ಟಿ ((ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) 2004-05ನೇ ಸಾಲಿನಿಂದ ಹೊಸದಾಗಿ ಯಾವುದೇ ಮನೆಗಳು ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ಆದರೆ 2003-04ನೇ ಸಾಲಿನವರೆಗೆ ಮಂಜೂರಾದ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದು 2004-05 ರಿಂದ ಇಲ್ಲಿಯವರೆಗೆ (ಫೆಬ್ರವರಿ 2006ರವರೆಗೆ) ನಿರ್ಮಾಣವಾದ ಮನೆಗಳ ಕ್ಷೇತ್ರವಾರು ವಿವರ ಈ ಕೆಳಗಿನಂತಿರುತ್ತದೆ. ನಿರ್ಮಾಣ ಪೂರ್ಣವಾಗಿರುವ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಕ್ಷೇತ್ರವಾರು ವಿವರ	ಮತ್ಸ್ಯಾಶ್ರಯ 1ನೇ ಹಂತ	ಮತ್ಸ್ಯಾಶ್ರಯ 2ನೇ ಹಂತ
ದಕ್ಷಿಣ ಕನ್ನಡ ಜಿಲ್ಲೆ		
ಉಳ್ಳಾಳ	2	52
ಮಂಗಳೂರು	2	11
ಸುರತ್ಕಲ್	–	24
ಮುಲ್ಕಿ ಮೂಡುಬಿದರೆ	1	28
ಉಡುಪಿ ಜಿಲ್ಲೆ		
ಕಾಪು	1	105
ಉಡುಪಿ	5	60
ಬ್ರಹ್ಮಾವರ	5	66
ಕುಂದಾಪುರ	4	81
ಬೈದೂರು	8	93
ಕಾರ್ಕಳ	–	33
ಉತ್ತರ ಕನ್ನಡ ಜಿಲ್ಲೆ		
ಕಾರವಾರ	2	104
ಅಂಕೋಲ	–	24
ಕುಮಟ	–	31
ಹೊನ್ನಾವರ	–	57
ಭಟ್ಕಳ	2	05

ಆ) ಸದರಿ ಯೋಜನೆಯನ್ನು ಹುಡ್ಕೋ ಸಾಲದ ನೆರವಿನೊಂದಿಗೆ ಕೈಗೆತ್ತಿಕೊಂಡಿದ್ದು. 1ನೇ ಹಂತದ ಯೋಜನೆಯ ಅನುಷ್ಠಾನಕ್ಕಾಗಿ ರೂ. 15.00 ಕೋಟಿ ಪೂರ್ಣ ಹಣವನ್ನು ರಾಜ್ಯದ ಎಲ್ಲಾ ಅನುಷ್ಠಾನಕ್ಕಾಗಿ ರೂ.15.00 ಕೋಟಿ ಪೂರ್ಣ ಹಣವನ್ನು ರಾಜ್ಯದ ಎಲ್ಲಾ ಅನುಷ್ಠಾನ ಸಂಸ್ಥೆಎಗಳಿಗೆ ಬಿಡುಗಡೆ ಮಾಡಲಾಗಿದೆ. ಇನೇ ಹಂತದ ಯೋಜನೆಯನ್ನು ರೂ 15.00 ಕೋಟಿ ವಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು. ಇದುವರೆವಿಗೂ ರೂ. 13.00 ಕೋಟಿಗಳನ್ನು ರಾಜ್ಯದಲ್ಲಿ ಎಲ್ಲಾ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಇ) 2004–05ನೇ ಸಾಲಿನಿಂದ ಯಾವುದೇ ಮೆನಗಳು ಸರ್ಕಾರದಿಂದ ಮಂಜೂರಾಗದೇ ಇರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.